# ಅಹಿಂಸೆ: ಮಾರ್ಟಿನ್ ಲೂಥರ್ ಕಿಂಗ್ ವಾದವನ್ನೀಗ ಸಾಬೀತು ಮಾಡುತ್ತಿರುವ ವಿಶ್ವ ವಿದ್ಯಮಾನಗಳು

## How the world is proving Martin Luther King right about nonviolence

**Erica Chenoweth and Maria J. Stephan**

Washington Post, January 18, 2016
Translation: April 2018

# ಅಹಿಂಸೆ: ಮಾರ್ಟಿನ್ ಲೂಥರ್ ಕಿಂಗ್ ವಾದವನ್ನೀಗ ಸಾಬೀತು ಮಾಡುತ್ತಿರುವ ವಿಶ್ವ ವಿದ್ಯಮಾನಗಳು

ಎರಿಕಾ ಚೆನೊವೆಥ್ ಮತ್ತು ಮರಿಯಾ ಜೆ.ಸ್ಟೀಫನ್ ಜನವರಿ 18,2016



ಮಹಿಳಾ ಹಕ್ಕುಗಳಿಗಾಗಿ ಹೋರಾಟ ನಡೆಸಿದ ಯೆಮೆನ್ ಕಾರ್ಯಕರ್ತೆ ತವಕ್ಕೊಲ್ ಕರ್ಮಾನ್ (ಬಲಭಾಗ, ಬಿಳಿಯ ತಲೆಗವಸು/ಸ್ಕಾರ್ಫ್)ರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ : ಸುದರ್ಶನ್ ರಾಘವನ್ ಫೋಟೋ ಎಡಿಟರ್.

*"ಅಹಿಂಸೆ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ದಲಿತರ ಬಳಿ ಇದ್ದ ಹೋರಾಟದ ಪ್ರಮುಖ ಪರಿಣಾಮಕಾರಿ ಅಸ್ತ್ರ ಎಂಬುದನ್ನು ಹಿಂದೆಂದಿಗಿಂತಲೂ ಪರಿಪೂರ್ಣವಾಗಿ ಖಾತರಿ ಮಾಡಿಕೊಂಡ ಬಳಿಕವಷ್ಟೇ ನಾನು ಭಾರತ ಬಿಟ್ಟು ಬಂದೆ" - "ಮಾರ್ಟಿನೂಥರ್ ಕಿಂಗ್ ಜೀವನಚರಿತ್ರೆ" ಸಂಪಾದಕರು : ಕ್ಲೇಬೋರ್ನ್ ಕಾರ್ಸನ್*

2011ರ ಬಳಿಕ ವಿಶ್ವದಲ್ಲಿ ವಿವಾದಗಳು ತೀರಾ ಹೆಚ್ಚುತ್ತಿವೆ. ಮಧ್ಯಪ್ರಾಚ್ಯ, ಸಾಹೆಲ್ ಹಾಗೂ ದಕ್ಷಿಣ ಏಷ್ಯಾಗಳಲ್ಲಿ ಹಿಂಸಾತ್ಮಕ ನಾಗರಿಕ ದಂಗೆಗಳು ಹೆಚ್ಚಿದ್ದರೂ ಜನರಿಗೆ ಇನ್ನು ಮುಂದೆ ತಮ್ಮ ಅಸಮಾಧಾನವನ್ನು ವ್ಯಕ್ತಮಾಡಲು ಹಿಂಸೆಯೊಂದೇ ಮಾರ್ಗವಲ್ಲ. ಟ್ಯುನಿಸ್ನಿಂದ ತಾಹಿರ್ ಸ್ಕ್ವೇರ್, ಝುಕೊಟ್ಟಿ ಪಾರ್ಕ್ನಿಂದ ಫರ್ಗ್ಯೂಸನ್, ಬುರ್ಕಿನಾ

ಘಸೋದಿಂದ ಹಾಗ್ಕಾಂಗ್ವರೆಗೆ ಸ್ವಯಂ ತಮ್ಮ ದೇಶ ಹಾಗೂ ಇನ್ನಿತರ ಹೊರ ದೇಶಗಳಲ್ಲೂ ಬದಲಾವಣೆಗೆ ಆಗ್ರಹಿಸಿ ಎಲ್ಲ ಚಳುವಳಿಗಳೂ ಗಾಂಧಿ, ಕಿಂಗ್ ಮೊದಲಾದವರ ಬೋಧನೆಗಳಿಂದ ಪ್ರಭಾವಿತಗೊಂಡಿವೆ.

ವಿರೋಧಿಗಳ ಮೇಲಿನ ಸಂಘಟಿತ ಮುಷ್ಕರಗಳು, ಪ್ರತಿಭಟನೆಗಳು, ಬಹಿಷ್ಕಾರಗಳು ಅಥವಾ ಇನ್ನಿತರ ಕ್ರಮಗಳು ಟೀಕೆಯಿಂದ ಹೊರತಾದವಲ್ಲ. ಕೆಲವು ಟೀಕೆಗಳು ನಾಗರಿಕರ ಪ್ರತಿರೋಧದ ತಪ್ಪು ತಿಳುವಳಿಕೆಯಿಂದಾಗಿ ಆಗಿದ್ದರೆ ಮತ್ತೆ ಕೆಲವು ಶಸ್ತ್ರ ರಹಿತ ಮತ್ತು ಶೋಷಿತ ಜನರು ಶಕ್ತಿಶಾಲಿಗಳ ವಿರುದ್ಧ ಸಂಘಟಿತರಾಗಿ ಸವಾಲೆಸೆಯುವ ಸಾಮರ್ಥ್ಯವನ್ನೇ ಶಂಕಿಸುತ್ತವೆ. ಪ್ರತಿಯೊಂದು ಹೊಸ ಚಳುವಳಿಗಳಿಂದಲೂ ಶಕ್ತಿಶಾಲಿಗಳು ತೋಡಿರುವ ಕಂದಕ ಮತ್ತು ವ್ಯವಸ್ಥಿತ ದಬ್ಬಾಳಿಕೆಗಳ ವಿರುದ್ಧ ಅಹಿಂಸಾತ್ಮಕ ಹೋರಾಟಗಳ ಸಾಫಲ್ಯತೆ ಬಗ್ಗೆ ಅದೇ ಪ್ರಶ್ನೆಗಳು ಉದ್ಭವಿಸುತ್ತವೆ. 2011 ರಲ್ಲಿ ನಾವು ಪುಸ್ತಕವನ್ನು ಪ್ರಕಟಿಸಿ ಇದೇ ಪ್ರಶ್ನೆಗಳ ಕುರಿತು ಕೂಲಂಕುಶವಾಗಿ ವಿಚಾರ ಮಾಡಿದ್ದೆವು. ಹೊಸ ಜವಾಬ್ದಾರಿಗಳೊಂದಿಗೆ ಒಳ ಬರುವ ರಾಷ್ಟ್ರೀಯ ನಾಯಕರ ವಿರುದ್ಧ ಅಥವಾ ಪ್ರಾದೇಶಿಕ ಸ್ವಾತಂತ್ರ್ಯಕ್ಕಾಗಿ ನಡೆಯುವ ಅಹಿಂಸಾತ್ಮಕ ಪ್ರತಿರೋಧಗಳು ಎರಡಕ್ಕೂ ಹೆಚ್ಚು ಬಾರಿ ಯಶಸ್ವಿಯಾಗಿರುವುದನ್ನು ಅನಿರೀಕ್ಷಿತವಾಗಿ ಕಂಡಿದ್ದೇವೆ.


ಹಲವರಿಗೆ ಈ ತೀರ್ಮಾನಗಳು ಸ್ವಾಭಾವಿಕ ಅನ್ನಿಸಬಹುದು. ಆದರೆ ವಿವರವಾದ ಅಂಕಿ ಅಂಶಗಳನ್ನು ಗಮನಿಸಿದರೆ ವಿರೋಧಿಗಳ ಮನಕರಗಿಸಿ ಅಹಿಂಸಾತ್ಮಕ ಹೋರಾಟಗಳು ಯಶಸ್ವಿಯಾಗಿಲ್ಲ ಎಂಬ ವಿಚಾರ ತಿಳಿದು ಬರುತ್ತದೆ. ಅಹಿಂಸಾತ್ಮಕ ಚಳವಳಿಗಳು ಭಾರೀ ಸಂಖ್ಯೆಯ ಜನರ ಭಾಗವಹಿಸುವಿಕೆ,ಅವರ ಅಭಿಪ್ರಾಯಗಳಿಗೆ ಅವಕಾಶ, ಜೊತೆಗೆ ಸಶಸ್ತ್ರ ದಂಗೆಗಿಂತಲೂ 11 ಪಟ್ಟು ಹೆಚ್ಚು ಜನರನ್ನು ಸಂಘಟಿಸಿ ಭಾಗಿಯಾಗಲು ಹೆಚ್ಚಿನ ಅವಕಾಶ ಕಲ್ಪಿಸಿಕೊಡಲಿದೆ.ವಿರೋಧಿ ಪಾಳಯದಲ್ಲಿ ಭಾರಿ ಬದಲಾವಣೆಗೆ ಇದು ಕಾರಣವಾಗಿದೆ. ಕಟ್ಟು ನಿಟ್ಟಾದ ನೀತಿಗೆ ಅಂಟಿಕೊಂಡಿರುವವರ ಬೆಂಬಲವನ್ನು ಕಡಿತ ಮಾಡಲಿದೆ. ಭಾಗವಹಿಸುವಿಕೆ ಅಹಿಂಸಾತ್ಮಕವಾಗಿದ್ದಲ್ಲಿ ನಾಯಕತ್ವದಿಂದ ಬೆಂಬಲವನ್ನು ಪಡೆಯಲು, ರಕ್ಷಣಾ ಪಡೆಗಳು, ಆರ್ಥಿಕವಾಗಿ ಸಧೃಡವಾಗಿರುವವರು ಯಾವುದೇ ರಕ್ತಪಾತವಿಲ್ಲದೇ ತಮ್ಮ ನಿಷ್ಠೆಯನ್ನು ಬದಲಿಸುವಂತೆ ಮಾಡಲು ಅವಕಾಶ ಮಾಡಿಕೊಡಲಿದೆ.

ಅಹಿಂಸಾತ್ಮಕ ಪ್ರತಿರೋಧವು ಕೇವಲ ಪರಿವರ್ತನೆಯ ಸಾಧ್ಯತೆಗಳಿಂದಾಗಿ ಮಾತ್ರವಲ್ಲ ಅವುಗಳ ಕ್ರಿಯಾಶೀಲ, ಸಹಕರಣೀಯ ಹಾಗೂ ಒತ್ತಾಯಿಸುವ ಸಾಧ್ಯತೆಗಳಿಂದಾಗಿ ಪರಿಣಾಮಕಾರಿಯಾಗಿದೆ ಎಂಬುದನ್ನು ಆಲ್ಬರ್ಟ್ ಐನ್ಸ್ಟೈನ್ ಸಂಸ್ಥೆಯ ಸ್ಥಾಪಕ ಜೇನ್ ಶಾರ್ಪ್ ಬಲವಾಗಿ ಪ್ರತಿಪಾದಿಸಿದ್ದರು. ಅಹಿಂಸಾತ್ಮಕ ಎಲ್ಲಾ ಹೋರಾಟಗಳೂ ಯಶಸ್ವಿ ಆಗಲಿಲ್ಲ. ಆದರೆ ಹಿಂಸಾತ್ನಕ ಹೋರಾಟಗಳು ಯಶಸ್ವಿ ಆಗುತ್ತವೆ ಎಂಬುದನ್ನು ಸಾಬೀತು ಮಾಡಲು ಯಾವುದೇ ಅಂಕಿ ಅಂಶಗಳೂ ಇರಲಿಲ್ಲ.

ಅದು 2011. ಈಗ 2016. ಕಳೆದ ಐದು ವರ್ಷಗಳಲ್ಲಿ ನಾವು ಅಹಿಂಸಾತ್ಮಕ ಹೋರಾಟದ ಕುರಿತು ಅರಿತಿದ್ದೇವೆ?. ಅಹಿಂಸಾತ್ಮಕ ಕ್ರಮದ ಅಚ್ಚರಿ ಹುಟ್ಟಿಸುವ ಪರಿಣಾಮಗಳ ಕುರಿತು ಸಂಶಂ ಹೊಂದಿರುವವರ ಕುರಿತಾದ ತಿಳುವಳಿಕೆಗಳ ಟಿಪ್ಪಣಿಯನ್ನು ಕೆಳಗೆ ಮಾಡಲಾಗಿದೆ.

## 1. ಅಹಿಂಸಾತ್ಮಕ ಚಳವಳಿಗಳು ಹೆಚ್ಚು ಸಾಮಾನ್ಯವಾಗಿವೆ.


ನಾವೀಗ ಇತಿಹಾಸದ ಅತ್ಯಂತ ಪ್ರಕ್ಷುಬ್ಧಮಯ ಸನ್ನಿವೇಶದಲ್ಲಿದ್ದೇವೆ ಎಂಬುದು ತಮ್ಮ ಭಾವನೆ ಆಗಿದ್ದರೆ ನಿಮ್ಮ ಭಾವನೆಯು ಸರಿಯಾಗಿಯೇ ಇದೆ. ಆದರೆ ಈ ಪ್ರಕ್ಷುಬ್ಧಮಯ ಪರಿಸ್ಥಿತಿ ಮಾತ್ರ ವಿಶಿಷ್ಟವಾಗಿದೆ. ಡೆನ್ವೆರ್ ವಿಶ್ವವಿದ್ಯಾಲಯದ ಪ್ರೊ. ಎರಿಕಾ ಚೆನೊವೆಥ್ರ ದತ್ತಾಂಶ ಆಧರಿತ ವಿವಾದಾತ್ಮಕವಾದ ಸಂಶೋಧನೆಯೊಂದರ ಪ್ರಮುಖ ಅಧ್ಯಾಯಗಳು ವಿಶ್ವದಾದ್ಯಂತ ಅಹಿಂಸಾತ್ಮಕ ಪ್ರತಿಭಟನೆಗಳು ಚಳವಳಿಗಳು ಮಾದರಿ ಬಗೆಯಾಗಿ ಹೊರ ಹೊಮ್ಮಿದೆ ಎನ್ನುತ್ತವೆ. ದಿ ನಾವ್ಕೋ ದತ್ತಾಂಶ ಸಂಶೋಧನೆ, ವಿವಿಧ ಮೂಲಗಳಿಂದ ಸಂಗ್ರಹಿಸಿದ ಮತ್ತು ಒಳಗೊಂಡ ಮಾನದಂಡಗಳ ಮಾಹಿತಿಗಳು ಇದೇ ಮಾದರಿ ಒಳಗೊಂಡಿದ್ದು ಉಳಿದ ಪ್ರತಿಭಟನೆಗಳ ದತ್ತಾಂಶಗಳು ಕೂಡ ಇದೇ ರೀತಿಯಾಗಿವೆ. ಹೋರಾಟವೊಂದರಲ್ಲಿ ಸಾವಿರದಷ್ಟು ಸಾವು ಸಂಭವಿಸಿದಂತಹ ದಂಗೆಗಳ ಪುನರಾವರ್ತನೆಗಳು 1970ರ ಬಳಿಕ ಕಡಿಮೆಯಾಗಿದ್ದು ಅಹಿಂಸಾತ್ಮಕ ಪ್ರತಿಭಟನೆಗಳ ಪ್ರಮಾಣ ಗಗನಕ್ಕೇರಿದೆ. ಹೊಸದಾದ ರಾಷ್ಟ್ರೀಯ ನಾಯಕತ್ವವೊಂದು ಅಧಿಕಾರಕ್ಕೇರುವುದನ್ನು ತೊಡೆದು ಹಾಕುವ ಅಥವಾ ಪ್ರಾದೇಶಿಕ ಸ್ವಾತಂತ್ರ್ಯಕ್ಕಾಗಿ ಪ್ರತ್ಯೇಕಗೊಳ್ಳುವ ಅಥವಾ ವಿದೇಶಿ ಸೇನೆಯ ಆಕ್ರಮಣವನ್ನು ಹೊರದಬ್ಬುವ ಅಥವಾ ವಸಾಹತುಶಾಹಿ ಆಳ್ವಿಕೆಯನ್ನು ಕೊನೆಗೊಳಿಸುವ ಉದ್ದೇಶ ಹೊಂದಿದ ತಾರಕಕ್ಕೇರಿದ ಚಳವಳಿಗಳಿಗೆ ನಿರ್ದಿಷ್ಟವಾಗಿ ಈ ದತ್ತಾಂಶಗಳು ಸೀಮಿತವಾಗಿವೆ.




ಈ ದಶಕದ ಮೊದಲ ಐದು ವರ್ಷಗಳಲ್ಲಿ ನಾವು ಅನೇಕ ಅಹಿಂಸಾ ಚಳವಳಿಗಳನ್ನು ನೋಡಿದ್ದೇವೆ. ಈ ಚಳವಳಿಗಳು 1990ರ ಅವಧಿಯ ಚಳವಳಿಗಿಂತಲೂ ಹೆಚ್ಚಾಗಿದ್ದು 2000ರ ಆಸುಪಾಸಿನಲ್ಲೂ ನಾವು ಇಂತಹ ಚಳವಳಿಗಳನ್ನು ನೋಡಿದ್ದೇವೆ. ಪ್ರಸ್ತುತ ದಶಕವು ಅತ್ಯಂತ ಕೋಲಾಹಲದಿಂದ ಕೂಡಿರುವ ದಾಖಲೆಯನ್ನು ಹೊಂದಿದೆ.

## 2. ಅಹಿಂಸಾತ್ಮಕ ಚಳವಳಿಗಳು ಸಾಮಾನ್ಯವಾಗಿದ್ದರೂ ಇವುಗಳ ಸಂಪೂರ್ಣ ಯಶಸ್ಸಿನ ಪ್ರಮಾಣದಲ್ಲಿ ಇಳಿಕೆಯಾಗಿದೆ.

ಅಹಿಂಸಾತ್ಮಕ ಚಳವಳಿಗಳ ಹೆಚ್ಚಳದಿಂದ ನಿರ್ಮಾಣವಾಗಿರುವ ಕಂದಕದ ನಡುವೆಯೂ ಕಡಿದಾದ, ಅಧ್ಯಯನ ಯೋಗ್ಯವಾದ ತಿರುವೊಂದನ್ನು ನಾವು ಕಾಣಬಹುದಾಗಿದೆ. ೧೯೯೦ರ ಅವಧಿಯಲ್ಲಿ ಅಹಿಂಸಾ ಚಳವಳಿಗಳ ಯಶಸ್ಸಿನ ಪ್ರಮಾಣ ಅತ್ಯಂತ ಹೆಚ್ಚಾಗಿದ್ದರೆ ಈ ದಶಕದಲ್ಲಿ ಈ ಯಶಸಸ್ಸು ತೀರಾ ಇಳಿಮುಖವಾಗಿದೆ.




ಅಹಿಂಸಾತ್ಮಕ ಹೋರಾಟಗಳ ಯಶಸ್ಸಿನ ಪ್ರಮಾಣ ಇಳಿಮುಖವಾಗುವುದಕ್ಕೆ ಕೆಲವೊಂದು ಕಾರಣಗಳಿರಬಹುದು. ಮೊದಲನೆಯದಾಗಿ ಆಡಳಿತ ವ್ಯವಸ್ಥೆಯ ವಿರೋಧಿಗಳು ಎದುರಾಗುತ್ತಿರುವ ಸವಾಲುಗಳನ್ನು ಅರಿತು ತಳಮಟ್ಟದಿಂದಲೇ ಅವುಗಳನ್ನು ಎದುರಿಸುವ ಸಾಧ್ಯತೆಗಳನ್ನು ಅಳವಡಿಸಿಕೊಳ್ಳುತ್ತಿರುವುದು.ಜನಶಕ್ತಿಯ ಸಾಧ್ಯತೆಗಳು ತಮ್ಮ ಆಳ್ವಿಕೆಗೆ ಬೆದರಿಕೆ ಒಡ್ಡಬಹುದೆಂಬುದನ್ನು  ಕೆಲ ದಶಕಗಳ ಹಿಂದೆ ಹೀಗಳೆದವರು ಈಗ ಅಹಿಂಸಾತ್ಮಕ ಚಳವಳಿಗಳು ನಿಜಕ್ಕೂ ಬೆದರಿಕೆ ಒಡ್ಡುತ್ತಿರುವುದನ್ನು ಕಾಣಬಹುದು.

ಬ್ರೂಸ್ ಬ್ಯೂನೋ ಡಿ ಮೆಸ್ಕ್ವಿಟಾ ಮತ್ತು ಅಲಸ್ಟೇರ್ ಸ್ಮಿತ್ರ "Dictators Handbook"  ದ ನಂತರದ ಪರಿಣಾಮಗಳು ಅಥವಾ ಇಂತಹ ಸಂದರ್ಭಗಳು ಎದುರಾದಾಗ ಹೆಚ್ಚು ಸಂಪನ್ಮೂಲಗಳನ್ನು ಕ್ರೋಢೀಕರಿಸಿ "ತೀಕ್ಷ್ಣ ಪ್ರತಿರೋಧ" ದ ಮೂಲಕ ಅವುಗಳನ್ನು ಬುಡಮೇಲು ಮಾಡುವುದನ್ನು ಕಾಣುತ್ತಿರಬಹುದು.

ಈ ಪಾಂಡಿತ್ಯಪೂರ್ಣ ರೂಪಾಂತರ ಪ್ರಕ್ರಿಯೆಯು ಅಥವಾ ಸ್ಮಿತ್ ಕಾಲೇಜಿನ ಕೆಚಮ್,ಮಧ್ಯಪ್ರಾಚ್ಯ ಅಧ್ಯಯನ ಪೀಠದ ಸ್ಟೀಫನ್ ಹೈಡ್ಮನ್ ಕರೆಯುವಂತೆ "ಅಥಾರಿಟೇರಿಯನಿಸಂ 2.0 (authoritarianism 2.0)," ಅಟ್ಲಾಂಟಿಕ್ ಕೌನ್ಸಿಲ್ನ ಸಂಶೋಧನೆ "ಭವಿಷ್ಯದ ದಬ್ಬಾಳಿಕೆಯ (Future of Authoritarianism)" ಕೇಂದ್ರ ಬಿಂದು.

ಎರಡನೆಯದಾಗಿ ಕಾರ್ಯಕರ್ತರ ಅಹಿಂಸಾತ್ಮಕ ಕ್ರಮಗಳ ಅಳವಡಿಕೆಯು ವಿಶ್ವದೆಲ್ಲೆಡೆಯ ತಮ್ಮ ಸಮಕಾಲೀನರಿಂದ ಕಲಿತಿರುವ ತಪ್ಪು ಪಾಠಗಳಾಗಿರಬಹುದು. ಉದಾಹರಣೆಗೆ ಟ್ಯುನೀಸಿಯಾದಲ್ಲಿ 2010 ಮತ್ತು 2011ರಲ್ಲಿ ನಡೆದ ಮುಷ್ಕರಗಳು ಹಾಗೂ ಮೂರು ವಾರಗಳ ಪ್ರದರ್ಶನಗಳ ಸುದ್ದಿಯ ಪ್ರಸರಣ. ಇದಕ್ಕೆ ಅನುಗುಣವಾಗಿ ಸರ್ವಾಧಿಕಾರಿಯನ್ನು ಪದಚ್ಯುತಗೊಳಿಸಲು ಇಷ್ಟು ಸಮಯ ಸಾಕು ಎಂದು ಯೋಚಿಸಲು ಕಾರಣವಾಯಿತು. ಆದರೆ ಟ್ಯುನೀಸಿಯಾದ ಇತ್ತೀಚಿನ ಇತಿಹಾಸದಲ್ಲಿ ತೀರಾ ವಿಶಿಷ್ಟವಾದ ಸಂಘಟಿತ ಕಾರ್ಮಿಕರ ಚಟುವಟಿಕೆಗಳು ದಂಗೆಗೆ ಕಾರಣವಾದವು. ಸಾರ್ವತ್ರಿಕ ಮುಷ್ಕರಗಳು ಟ್ಯುನೀಸಿಯಾದ ಆರ್ಥಿಕತೆಯನ್ನು ಬುಡಮೇಲುಗೊಳಿಸುವ ಬೆದರಿಕೆ ಒಡ್ಡಿದ್ದವು ಎಂಬ ಸತ್ಯಾಂಶವನ್ನು ಇದು ಮರೆಮಾಚಿತು. ಇದು ಎಷ್ಟರ ಮಟ್ಟಿನ ಪರಿಣಾಮ ಬೀರಿತೆಂದರೆ ಆರ್ಥಿಕ ವ್ಯವಹಾರ-ಉದ್ದಿಮೆಗಳ ದಿಗ್ಗಜರು ಅಧ್ಯಕ್ಷ ಝೈನ್ ಎಲ್ ಅಬಿದೈನ್ ಬೆನ್ ಅಲಿಯವರಿಗೆ ನೀಡಿದ್ದ ಬೆಂಬಲವನ್ನು ಹಿಂಪಡೆಯುವ, ಸ್ವಯಂಚಾಲಿತ ಶಸ್ತ್ರಾಸ್ತ್ರಗಳ ಮೂಲಕ ಪ್ರದರ್ಶನಕಾರರ ಮೇಲೆ ಆಕ್ರಮಣ ಮಾಡುವಂತೆ ಅಧ್ಯಕ್ಷರು ನೀಡಿದ್ದ ಆದೇಶವನ್ನು ಭದ್ರತಾ ಪಡೆಗಳೇ ಧಿಕ್ಕರಿಸುವುದಕ್ಕೂ ಇದು ಕಾರಣವಾಗಿತ್ತು.

ಇಂತಹದ್ದೇ ಆದ ಇತರ ಸನ್ನಿವೇಶಗಳಿಂದ ಕಾರ್ಯಕರ್ತರು ಪ್ರೇರಣೆ ಪಡೆಯುವುದು ಸಾಮಾನ್ಯ. ಇದು ಕೆಲವೊಮ್ಮೆ ವಿಫಲವಾಗಲೂಬಹುದು. ಉದಾಹರಣೆಗೆ ಟೆಕ್ಸಸ್ ವಿಶ್ವವಿದ್ಯಾಲಯದ ಕುರ್ತ್ ವೇಲ್ಯಾಂಡ್ ಬೊಟ್ಟು ಮಾಡುವಂತೆ 1848ರ ಹಿಂಸಾತ್ಮಕ ಕ್ರಾಂತಿ ವೇಳೆ ಫ್ರೆಂಚ್ ಚಕ್ರವರ್ತಿ ವಿರುದ್ಧ ಆರಂಭಿಕ ದಂಗೆಯ ತಂತ್ರಗಾರಿಕೆಯನ್ನೇ ಭಿನ್ನಮತೀಯರು ಯಥಾವತ್ ಅನುಸರಿಸಿದರು. ಆದರೆ ಮೊದಲೇ ಪೂರ್ವ ತಯಾರಿ ನಡೆಸಿದ್ದ ಹಾಗೂ ಸಂಪನ್ಮೂಲಗಳ ಲಾಭ ಹೊಂದಿದ್ದ ಚಕ್ರವರ್ತಿಯು ಬಹುಮುಖ್ಯವಾಗಿ ಭಿನ್ನವಾಗಿದ್ದ ವಿರೋಧಿಗಳಾಗಿದ್ದರು. ಬಳಿಕ ಈ ಚಕ್ರವರ್ತಿಗಳು ಕ್ರಾಂತಿಕಾರರ ನಡೆಗಳನ್ನು ಮೊದಲೇ ಊಹಿಸಿಕೊಳ್ಳಲು ಶಕ್ತರಾಗಿದ್ದಲ್ಲದೇ ದಂಗೆಯನ್ನು ದಮನ ಮಾಡಲು ಹಾಗೂ ವಿರೋಧಿಗಳನ್ನು ತಮ್ಮ ಪರವಾಗಿ ಇಬ್ಬಾಗ ಮಾಡಲು ಸಾಧ್ಯವಾಗಿತ್ತು.ವಿಶೇಷವಾಗಿ ಪ್ರಾದೇಶಿಕ ಉತ್ಕರ್ಷಗಳಲ್ಲಿ ಇಂದು ಕೂಡ ಅದೇ ರೀತಿಯ ಚಲನೆಯನ್ನು ನಾವು ನೋಡಬಹುದಾಗಿದೆ.

## 3. ಹೀಗಿದ್ದರೂ ನಂಬಿ ಇಲ್ಲವೇ ನಂಬದಿರಿ, ಅಹಿಂಸಾತ್ಮಕ ಚಳವಳಿಗಳು ಇನ್ನೂ ಕೂಡ ಹಿಂಸೆಗೂ ಹೆಚ್ಚು ಯಶಸ್ಸು ಕಾಣುತ್ತಿವೆ.

1960ರ ಬಳಿಕ ಒಟ್ಟಾರೆ ಪೂರ್ಣ ಯಶಸ್ಸಿನ ವಿಚಾರಕ್ಕೆ ಬಂದಾಗ ಹಿಂಸಾತ್ಮಕ ಚಳವಳಿಗಳು ತೀರಾ ಕೆಟ್ಟ ಪರಿಣಾಮಗಳನ್ನುಂಟುಮಾಡಿವೆ. 1900 ರಿಂದ 2015ರ ನಡುವಿನ ಸರಾಸರಿ ಗಣನೆಗೆ ತೆಗೆದುಕೊಂಡರೆ ಅಹಿಂಸಾತ್ಮಕ ಚಳವಳಿಗಳು ಶೇ.51 ರಷ್ಟು ಹೆಚ್ಚು ಯಶಸ್ವಿಯಾಗಿದ್ದರೆ ಹಿಂಸಾತ್ಮಕ ಚಳವಳಿಗಳ ಯಶಸ್ಸು ಶೇ.27 ರಷ್ಟಿದೆ. ಈ ದಶಕದಲ್ಲಿ ಶೇ.30 ರಷ್ಟು ಅಹಿಂಸಾತ್ಮಕ ಚಳವಳಿಗಳು ಯಶಸ್ವಿ ಆಗಿದ್ದರೆ ಶೇ.12 ರಷ್ಟು ಹಿಂಸಾತ್ಮಕ ಚಳವಳಿಗಳು

ಯಶಸ್ಸನ್ನು ಕಂಡಿವೆ. ಇವೆರಡರ ನಡುವಿನ ಯಶಸ್ಸಿನ ಪ್ರಮಾಣದಲ್ಲಿ ಸರಾಸರಿಗಿಂತಲೂ ಹೆಚ್ಚಿನ ಅಂತರ ಕಾಣಬಹುದಾಗಿದೆ.

## 4.ಅಹಿಂಸಾತ್ಮಕ ಸಾಮೂಹಿಕ ಹೋರಾಟಗಳು ಹಿಂಸಾತ್ಮಕ ಮಗ್ಗಲುಗಳಿಗೆ ಹಿನ್ನಡೆ ತಂದಿವೆ.

ಶಸ್ತ್ರರಹಿತ ಹೋರಾಟಗಳಲ್ಲಿ ಸ್ವಲ್ಪ ಪ್ರಮಾಣದ ಹಿಂಸಾಚಾರ ಸಹಕಾರಿ ಆಗುತ್ತವೆಯೋ ಅಥವಾ ಅಹಿಂಸಾತ್ಮಕ ಹೋರಾಟಗಳಿಗೆ ಘಾಸಿ ಉಂಟು ಮಾಡುತ್ತವೆಯೇ ಎಂಬ ಪ್ರಶ್ನೆ 2011ರಿಂದ ಬಿಸಿ ಚರ್ಚೆಯ ವಿಷಯವಾಗಿದೆ. ಅಮೆರಿಕದಲ್ಲಿ ನಡೆಯುವ "ವೈವಿಧ್ಯಮಯ ತಂತ್ರಗಾರಿಕೆ" ಕುರಿತಾದ ಚರ್ಚಾ ಕೂಟಗಳಲ್ಲಿ ಈ ಪ್ರಶ್ನೆ ಪ್ರಸ್ತಾಪವಾಗುತ್ತಿವೆ.ಆದರೆ ಅಹಿಂಸಾತ್ಮಕವಾದ, ಹಿಂಸಾತ್ಮಕವಾದ ಅಥವಾ ಎರಡರ ಮಿಶ್ರಣ ಹೊಂದಿದ ಹೋರಾಟಗಳು ಅನೇಕ ಚಳವಳಿಗಳಲ್ಲಿ ವಿಶ್ವದಾದ್ಯಂತ ತೀವ್ರಗಾಮಿ ಬದಲಾವಣೆ ಕಾಣುತ್ತಿವೆ. ವೀಕ್ಷಕರು,ಪಂಡಿತರು ಹಾಗೂ ಕಾರ್ಯಕರ್ತರ ಪರ,ವಿರೋಧ ಅಭಿಪ್ರಾಯಗಳ ನಡುವೆಯೂ ಈ ವಿಚಾರ ತೀರಾ ಇತ್ತೀಚಿನವರೆವಿಗೂ ಸಾಮ್ರಾಜ್ಯಗಳ ಲ್ಲಿ ಪರಿಣಾಮಕಾರಿಯಾದ ಪರಾಮರ್ಶೆಗೆ ಒಳಪಟ್ಟಿರಲಿಲ್ಲ.

ಇತ್ತೀಚಿನ ಲೇಖನದಲ್ಲಿ ರುತ್ಗರ್ಸ್ ವಿಶ್ವವಿದ್ಯಾಲಯದ  ಚೆನೊವೆಥ್ ಮತ್ತು ಕುರ್ತ್ ಶಾಕ್ ಮೌಲಿಕ ದತ್ತಾಂಶಗಳನ್ನು ಬಳಸಿ ಸೀಮಿತ ಹಿಂಸಾಚಾರದ ಅಧ್ಯಯನ ನಡೆಸಿದ್ದಾರೆ. ಹೋರಾಟಗಳ ಹಿಂಸಾತ್ಮಕ ಮಗ್ಗಲುಗಳು ಮಾಧ್ಯಮಗಳ ಗಮನ ಸೆಳೆಯುವುದು, ಸ್ವಯಂ ರಕ್ಷಣೆಯ ಅರಿವು, ಹೆಚ್ಚು ಮೂಲಭೂತವಾದಿಗಳೆನಿಸಿದ ಸದಸ್ಯರ ಬದ್ಧತೆಯ ಮೇಲಿನ ವಿರೋಧಿ ಸಂಸ್ಕೃತಿಯನ್ನು ಶಮನಗೊಳಿಸುವುದು ಅಥವಾ ದಳ್ಳುರಿ ಸೃಷ್ಟಿಸಿದ ಹೊಗೆಯನ್ನು ಭಾವನಾತ್ಮಕವಾಗಿ ಉಪಶಮನಗೊಳಿಸುವುದು ಮೊದಲಾದ ಅಲ್ಪಕಾಲೀನ ಗುರಿ ಈಡೇರಿಕೆಯಲ್ಲಿ ಯಶಸ್ಸು ಕಾಣಬಹುದು. ಆದರೆ ಹಿಂಸಾತ್ಮಕ ಹೋರಾಟಗಳು ಭಾರಿ ಸಂಖ್ಯೆಯ ಮತ್ತು ವಿವಿಧ ಮೂಲಗಳ ಭಾಗವಹಿಸುವಿಕೆಯ, ತೃತೀಯ ಶಕ್ತಿಗಳ ಬೆಂಬಲ ಕ್ರೋಢೀಕರಿಸುವ ಹಾಗೂ ಭದ್ರತಾ ಪಡೆಗಳಲ್ಲಿನ ನಿಷ್ಠೆಯನ್ನು ಬದಲಿಸುವ ದೀರ್ಘ ಕಾಲೀನ ತಂತ್ರಗಾರಿಕೆಯನ್ನು ದುರ್ಬಲಗೊಳಿಸುತ್ತವೆ. ಹಿಂಸಾತ್ಮಕ ಮಗ್ಗಲುಗಳು ತೀರಾ ಕಡಿಮೆ ಸಂಖ್ಯೆಯ ಭಾಗವಹಿಸುವಿಕೆ ಹಾಗೂ ಬಹುತೇಕ ಏಕರೀತಿಯ ಭಾಗವಹಿಸುವಿಕೆಯನ್ನು ಹೊಂದಿಕೊಂಡಿದ್ದು ಮೊದಲನೆಯದಾಗಿ ಅಹಿಂಸಾತ್ಮಕ ಪ್ರತಿರೋಧಗಳ ಪ್ರಮುಖ ಅನುಕೂಲಗಳನ್ನು ಕಡೆಗಣಿಸುವುದಕ್ಕೆ ಸಾಕ್ಷ್ಯಗಳನ್ನು ಕಂಡುಕೊಳ್ಳಲಾಗಿದೆ. ಇದೇ ವಿಚಾರದಲ್ಲಿ ಮತ್ತೊಂದು ಅಧ್ಯಯನವು ಹಿಂಸಾತ್ಮಕ ಪ್ರತಿಭಟನೆಗಳು ಆಡಳಿತ ವ್ಯವಸ್ಥೆಯ ದಂಗೆಯನ್ನು ಹೆಚ್ಚಿಸುವ ಹಾಗೂ ಕಡಿಮೆ ಪ್ರಮಾಣದ ಭಾಗವಹಿಸುವಿಕೆಯ್ನು ಗುರುತಿಸಿದೆ. ಅಹಿಂಸಾತ್ಮಕ ಚಳವಳಿಗಳ ಯಶಸ್ಸಿಗೆ ಹಿಂಸಾತ್ಮಕ ವಿಧಾನಗಳು ನೆರವಾಗುವುದಿಲ್ಲ ಎಂಬುದು ಸಾಬೀತಾಗಿದೆ. ಪ್ರಿನ್ಸ್ಟನ್ ವಿವಿಯ ಒಮರ್ ವಾಸೊವ್ ಹಿಂಸಾತ್ಮಕ ಮತ್ತು ಅಹಿಂಸಾತ್ಮಕ ಪ್ರತಿಭಟನೆಗಳ ರಾಜಕೀಯ ಪರಿಣಾಮಗಳ ಕುರಿತು ಇನ್ನಷ್ಟು ಸಾಕ್ಷ್ಯಗಳನ್ನು ನೀಡುತ್ತಾರೆ. 1960ರ ಅವಧಿಯಲ್ಲಿ ಕಪ್ಪು ಅಮೆರಿಕನ್ನರ ಪ್ರತಿಭಟನೆಗಳ ಅನುಕೂಲಕರ ದತ್ತಾಂಶಗಳು, ಅಹಿಂಸಾತ್ಮಕ ಪ್ರತಿಭಟನೆಗಳ ಹೆಚ್ಚಳ "ನಾಗರಿಕ ಹಕ್ಕು"ಗಳಿಗಾಗಿ  ಅಮೆರಿಕದ ಜನರ ಕಾಳಜಿಯ ಪ್ರಾಥಮಿಕ ವಿಚಾರವಾಗಿ ಹೆಚ್ಚು ಬೆಂಬಲಕ್ಕೆ ಕಾರಣವಾಯಿತು ಎಂದು ವಾಸೊವ್ ಅತ್ಯಂತ ಪರಿಣಾಮಕಾರಿಯಾಗಿ ಮನದಟ್ಟು ಮಾಡುತ್ತಾರೆ. ಇದೇ ವೇಳೆ ಹಿಂಸಾತ್ಮಕ ಪ್ರತಿಭಟನೆಗಳ ಹೆಚ್ಚಳವು "ಕಾನೂನು ಮತ್ತು ಸುವ್ಯವಸ್ಥೆ" ಮೊದಲ ಆದ್ಯತೆಯ ವಿಚಾರವಾಗಿ

ಗಮನಹರಿಸುವಂತೆ ಮಾಡಿತು. 1965ರ ಬಳಿಕ ಹಿಂಸಾತ್ಮಕ ಹೋರಾಟಗಳು ಸಾಮಾನ್ಯವಾದಾಗ ಜನರ ಅಭಿಪ್ರಾಯಗಳು "ನಾಗರಿಕ ಹಕ್ಕು"ಗಳಿಗೆ ಬದಲಾಗಿ ಪೊಲೀಸ್ ಸ್ಪಂದನೆಗೆ ಬೆಂಬಲ ನೀಡುವ ಕಡೆಗೆ ಬದಲಾಯಿತು. ಚಳವಳಿಯು ಯಾವ ರೀತಿಯಾಗಿ ಬೆಂಬಲದ ನಿರ್ಣಾಯಕ ನೆಲೆಗಟ್ಟಿನಿಂದ ತನ್ನ ಪರಿಣಾಮವನ್ನು ಬೇರೆಡೆಗೆ ತಿರುಗಿಸಿತು ಎಂಬುದನ್ನು ತೋರಿಸಿತು. ಜನಾಭಿಪ್ರಾಯವು ಕೇವಲ ಅಲ್ಪಕಾಲೀನ ಮಾತ್ರವಲ್ಲ ದೀರ್ಘಕಾಲೀನವಾಗಿಯೂ ಪರಿಣಾಮಕಾರಿ ಆಯಿತು. ರಿಪಬ್ಲಿಕನ್ ನಾಯಕತ್ವದ ಪರ ಮತಗಳು  "ಕಾನೂನು ¡ತ್ತು ಸುವ್ಯವಸ್ಥೆ"ಯ ವಿಚಾರಕ್ಕೆ ಅತಿಯಾಗಿ ಸಂಬಂಧಿಸಿತ್ತು ಎಂದು ವಾಸೊವ್ ಮನಗಂಡರು. ವಿವಿಧ ರೀತಿಯ ಪ್ರತಿಭಟನೆಗಳು ಅಮೆರಿಕದ ರಾಜಕಾರಣದ ಮೇಲೆ ದೀರ್ಘಕಾಲೀನ ಪರಿಣಾಮಗಳನ್ನು ಬೀರಿದ್ದನ್ನು ಇದು ತೋರಿಸಿತು.

## 5. ಊಹೆಗೂ ನಿಲುಕದ ಅಹಿಂಸಾತ್ಮಕ ಬಿಕ್ಕಟ್ಟುಗಳು

ಸಮಾಜಶಾಸ್ತ್ರದ ಸಂಪೂರ್ಣ ಕ್ಷೇತ್ರವು ಯಾವಾಗ ಸಾಮಾಜಿಕ ಚಳವಳಿಗಳು ಅಥವಾ ಪ್ರತಿಭಟನೆಗಳು ನಡೆಯುತ್ತವೆ ಎಂಬುದರ ಕುರಿತು ಇನ್ನು ಮುಂದೆ ಕಾಳಜಿ ಹೊಂದಿರಲಾರದು.  ಮೊದಲೇ ಊಹಿಸಿಕೊಳ್ಳಬಹುದಾದ, ಅತ್ಯಂತ ವಿನಾಶಕಾರಿ, ಗದ್ದಲ ಉಂಟು ಮಾಡುವ ಸಂಘಟಿತ ಕ್ರಮದ ಹಾಗೂ ಆಡಳಿತ ವ್ಯವಸ್ಥೆಯ ವಿರುದ್ಧ ಕೇಂದ್ರಿತವಾದ ಬಹುಸಂಖ್ಯಾತ ಅಹಿಂಸಾತ್ಮಕ ಪ್ರತಿರೋಧಗಳು ಭಿನ್ನವಾಗಿದ್ದು ರಾಷ್ಟ್ರೀಯ ಮಟ್ಟದಲ್ಲಿನ ಯಥಾಸ್ಥಿತಿಯನ್ನು ಮೂಲಭೂತವಾಗಿ ಬದಲಿಸುವ ಉದ್ದೇಶದೊಂದಿಗೆ ನಡೆಯುತ್ತವೆ. ಉತ್ಪಾದಕ ವಲಯಗಳ ದಟ್ಟಣೆ(ಬುಚರ್ ಅಂಡ್ ಸ್ವೆನ್ಸನ್ 2014), ಭಾವನೆಗಳು(ಪರ್ಲ್ಮನ್ 2013), ಭೌಗೋಳಿಕ ಸಾಮಿಪ್ಯತೆ(ಗ್ಲೆಡಿಚ್ ಮತ್ತು ರಿವೇರಾ 2015) ಹಾಗೂ ಪ್ರತಿಭಟನೆಯ ಇತಿಹಾಸ(ಬ್ರೇಥ್ವೆಟ್, ಬ್ರೇಥ್ವೆಟ್ ಮತ್ತು ಕ್ಯುಬಿಕ್ 2015)ಗಳ ಕುರಿತಾದ ಅಧ್ಯಯನಗಳು ಅಹಿಂಸಾತ್ಮಕ ಪ್ರತಿರೋಧಗಳ ಕಾರಣಗಳನ್ನು ಪರಾಮರ್ಶಿಸಿವೆ.

2015ರಲ್ಲಿ ಚೆನೊವೆಥ್ ಮತ್ತು ಜೇ ಉಲ್ಫೆಲ್ಡರ್ ಸಾಮೂಹಿಕ ದಂಗೆಯ ಅನೇಕ ಸಾಮಾನ್ಯ ಸಿದ್ಧಾಂತಗಳ ಮೌಲ್ಯಮಾಪನ ಮಾಡಿದರು. ಅಹಿಂಸಾತ್ಮಕ ಚಳವಳಿಗಳಲ್ಲಿ ಕೆಲವೊಂದು ಎಲ್ಲಿ ಹುಟ್ಟಿಕೊಳ್ಳುತ್ತವೆ ಎಂಬುದನ್ನು ನಿಖರವಾಗಿ ಊಹಿಸಬಹುದು ಎಂಬುದನ್ನು ಪತ್ತೆ ಮಾಡಿದರು. ಸಶಸ್ತ್ರ ದಂಗೆ, ಕ್ರಾಂತಿ ಅಥವಾ ಆಡಳಿತಶಾಹಿಯ ಪತನಕ್ಕೆ ಹೊರತಾದ ಪಂಡಿತರು ಊಹಿಸಲು ಸಾಧ್ಯವಾಗುವ ಅಹಿಂಸಾತ್ಮಕ ಚಳವಳಿಗಳು ಎಲ್ಲೂ ಯಾವಾಗ ಬೇಕಾದರೂ ಸಂಭವಿಸಬಹುದೆಂದು ಕಂಡುಕೊಂಡರು. ಅತೃಪ್ತಿಯನ್ನು ಹೋರಾಟವಾಗಿ ಸಂಘಟಿಸುವುದು ಅಥವಾ ಪರಿಣಾಮಕಾರಿಯಾಗಿ ಸಂಘಟಿಸುವುದು ಸಾಧ್ಯವಾಗದ ಮಾತು ಎಂದು ಪಂಡಿತರು ವಿಶ್ಲೇಷಿಸುತ್ತಿರುವಾಗಲೇ ಇವು ಸಂಭವಿಸಬಹುದು.ಯಾವ ಕಾರಣವು ಅವರನ್ನು ಪ್ರಚೋದಿಸಬಲ್ಲದು ಅಥವಾ ವಿಚಾರಕ್ಕೆ ಅಂಟಿಕೊಳ್ಳುವಂತೆ ಮಾಡಬಲ್ಲದು ಎಂಬುದು ಸ್ಪಷ್ಟವಾಗಲಾರದು. ನಾಗರಿಕರ ಶಕ್ತಿಯ ಚಳವಳಿಗಳು ಯಾವುದೇ ಒಂದು ವಿಚಾರಕ್ಕೆ ಸಂಬಂಧಿಸಿರುತ್ತವೆ ಅಥವಾ ಆಕಸ್ಮಿಕವಾಗಿರುತ್ತವೆ ಎಂದು ಚೆನೊವೆಥ್ ಮತ್ತು ಉಲ್ಫೆಲ್ಡರ್ ಅಭಿಪ್ರಾಯಪಟ್ಟರೂ ಕೇವಲ ನಿಖರವಾಗಿ ಅಂದಾಜು ಮಾಡುವ ಸಾಧನಗಳು ಅಥವಾ ದತ್ತಾಂಶಗಳು ಇವುಗಳ ಕಾರಣವನ್ನು ಪತ್ತೆ ಹಚ್ಚಲಾರವು ಎಂಬ ತೀರ್ಮಾನಕ್ಕೆ ಬರುತ್ತಾರೆ. ಕೆಲವೊಮ್ಮೆ ಅಹಿಂಸಾತ್ಮಕ ದಂಗೆಯನ್ನು ಸಂಘಟಿಸುವ ಶಕ್ತಿಗಳು ಕ್ರಿಯಾಶೀಲರಾಗಿ ಕೆಲವೊಂದು ಪ್ರತಿಕೂಲ ಸಂದರ್ಭಗಳನ್ನು ಊಹೆಗೂ ನಿಲುಕದಂತೆ ನಿಭಾಯಿಸುತ್ತಾರೆ ಎಂಬುದು ಅವರ ಈ ಕೊನೆ ತೀರ್ಮಾನಕ್ಕೆ ಕಾರಣವಾಗುತ್ತದೆ.

**6. ದಬ್ಬಾಳಿಕೆ ಎಲ್ಲಾ ಭಿನ್ನಮತೀಯ ಚಳವಳಿಗೆ ಸವಾಲು ಹಾಕುತ್ತವೆ. ಆದರೆ ಅಹಿಂಸಾತ್ಮಕ ಪ್ರತಿರೋಧದ ಆಯ್ಕೆಯನ್ನು ಅಥವಾ ಅದರ ಪರಿಣಾಮಗಳನ್ನು ಮೊದಲೇ ನಿರ್ಧರಿಸುವುದಿಲ್ಲ.**

ಎಲ್ಲಿಯವರೆಗೆ ಎದುರಾಳಿಗಳು ನಯವಾದ ಪ್ರದರ್ಶನ ನೀಡುತ್ತಾರೋ ಅಲ್ಲಿವರೆಗೂ ಅಹಿಂಸಾತ್ಮಕ ಪ್ರತಿರೋಧಗಳು ನಡೆಯಬಹುದು ಮತ್ತು ಯಶಸ್ವಿಯೂ ಆಗಬಹುದು ಎಂಬ ಜನಪ್ರಿಯ ವಾದವಿದೆ. ಆದರೆ ಯಾವಾಗ ಎದುರಾಳಿ ಕೈಗವಸುಗಳನ್ನು ಬಿಚ್ಚಿ ಎದುರು ನಿಲ್ಲುತ್ತಾನೋ ಅಹಿಂಸಾತ್ಮಕ ಪ್ರತಿರೋಧಗಳು ಅಸಾಧ್ಯ ಅಥವಾ ನಿಷ್ಪ್ರಯೋಜಕ. 2011ರ ನಮ್ಮ ಪುಸ್ತಕದಲ್ಲಿ ನಾವು ಈ ವಿಚಾರದ ಕುರಿತು ತರ್ಕ ಮಾಡಿದ್ದೇವೆ. ಈ ಪ್ರಮುಖ ಪ್ರಶ್ನೆಯ ಕುರಿತು ಇತ್ತೀಚಿನ ಸಂಶೋಧನೆಗಳೂ ಸೇರಿಕೊಂಡಿವೆ. ಅಮಾನುಷವಾದ ದಬ್ಬಾಳಿಕೆ ಅಹಿಂಸಾತ್ಮಕವಾದ ಹೋರಾಟದ ಮೇಲೆ ಪ್ರಭಾವ ಬೀರುತ್ತವೆಯೇ ಎಂಬ ವಿಚಾರದ ಕುರಿತು ವೆಂಡೀ ಪರ್ಲ್ಮನ್ ಹೀಗೆ ವಾದ ಮಂಡಿಸುತ್ತಾರೆ. ಪ್ಯಾಲೆಸ್ತೀನ್ ರಾಷ್ಟ್ರೀಯ ಚಳವಳಿಯ ಕುರಿತಾದ ತಮ್ಮ ಅತ್ಯಮೂಲ್ಯವಾದ ಪುಸ್ತಕದಲ್ಲಿ ಅಹಿಂಸಾತ್ಮಕವಾಗಿದ್ದ ಚಳವಳಿ ಯಾಕೆ ಹಿಂಸಾತ್ಮಕ ರೂಪಕ್ಕೆ ತಿರುಗಿತು ಎಂಬುದನ್ನು ಕೇವಲ ದಬ್ಬಾಳಿಕೆ ಮಾತ್ರ ವಿವರಿಸಲಾರದು ಎಂದು ಅವರು ಹೇಳುತ್ತಾರೆ. ಹಿಂಸಾತ್ಮಕ ಚಳವಳಿಯ ಅವಧಿಯಂತೆ ಅಹಿಂಸಾತ್ಮಕ ಹೋರಾಟದ ಅವಧಿಯಲ್ಲಿ(ಮೊದಲ ದಂಗೆ; ಫಸ್ಟ್ ಇಂಟಿಫಡಾ) ದಬ್ಬಾಳಿಕೆ ತೀವ್ರ ಪ್ರಮಾಣದಲ್ಲಿತ್ತು.ಪರಸ್ಪರ ಹೊಂದಾಣಿಕೆಯ ಪ್ರಮಾಣವು ಹಿಂಸಾರೂಪಕ್ಕೆ ತಿರುಗುವುದನ್ನು ಉತ್ತಮವಾಗಿವಿವರಿಸಬಲ್ಲದು ಎಂದು ಅವರು ವಾದಿಸುತ್ತಾರೆ.

ಸಂಶೋಧಕರಾದ ಜೊನಥಾನ್ ಸುಟಾನ್, ಚಾರ್ಲ್ಸ ಐಸಾಕ್ ಸ್ಟೆನ್ಸನ್ ಕೂಡ ಚಳವಳಿಯ ಸ್ವರೂಪ ಮತ್ತು ಸಂಘಟನೆಯ ಕುರಿತು ಇದೇ ರೀತಿಯಾಗಿ ಪ್ರತಿಪಾದಿಸುತ್ತಾರೆ. ದಬ್ಬಾಳಿಕೆಗೆ ಎದುರಾಗಿ ಈ ವಿಚಾರಗಳು ಚಳವಳಿಯ ಸಾಧ್ಯಾಸಾಧ್ಯತೆಗಳನ್ನು ತೋರಿಸುತ್ತವೆ. ಶಸ್ತ್ರ ರಹಿತವಾದ ಪ್ರತಿಭಟನೆಗಳ ವಿರುದ್ಧ ಆಡಳಿತವು ಏಕಪಕ್ಷೀಯವಾದ ಹಿಂಸೆ ಅಥವಾ ಸಾಮೂಹಿಕ ಹತ್ಯೆಯನ್ನು ನಡೆಸಿದರೆ ದೀರ್ಘಕಾಲೀನ ಹೋರಾಟದಲ್ಲಿ ಪ್ರದರ್ಶನಕಾರರು ಬೃಹತ್ ಸಂಘಟಿತ ಚಳವಳಿ ಮೂಲಕ ಯಶಸ್ವಿಯಾಗಲೂಬಹುದು

ಎನ್ನುತ್ತಾರೆ.

ಅತ್ಯಂತ ಬಲಶಾಲಿಯಾದ ಮತ್ತು ಜಟಿಲವಾದ ದಬ್ಬಾಳಿಕೆ ವ್ಯವಸ್ಥೆ ವಿರುದ್ಧ ಅಹಿಂಸಾತ್ಮಕ ವಿರೋಧದ ಸಾಮರ್ಥ್ಯದ ಕುರಿತು ಅದರಲ್ಲೂ ಮುಖ್ಯವಾಗಿ ಜನಾಂಗೀಯ ಹತ್ಯೆ ಅಥವಾ ರಾಜಕೀಯ ಉದ್ದೇಶಗಳನ್ನು ಹೊಂದಿರುವ ವ್ಯವಸ್ಥೆ ವಿರುದ್ಧದ ಹೋರಾಟದ ಯಶಸ್ಸಿನ ಕುರಿತು ಕೆಲ ಸಂಶೋಧಕರು ಸಂಶಯ ವ್ಯಕ್ತಮಾಡುತ್ತಾರೆ."ಗ್ವಾಟೆಮಾಲಾ ಭದ್ರತಾ ಪಡೆಗಳ" ಕುರಿತು  ಕ್ರಿಸ್ಟೋಫರ್ ಸುಲ್ಲಿವಾನ್ರ ಇತ್ತೀಚಿನ ಪುಸ್ತಕದಲ್ಲಿ ಜಟಿಲ ಮತ್ತು ಬದ್ಧತೆಯಿಂದ ಕೂಡಿದ ಕೆಲವೊಂದು ಸರ್ಕಾರಗಳ ಆಡಳಿತವನ್ನು ಉದಾಹರಿಸುತ್ತಾರೆ. ಮುಖ್ಯವಾಗಿ 1975-1985ರ ನಡುವೆ ಎಡಪಂಥೀಯ ವಿರೋಧವನ್ನು ಬುಡಮೇಲುಗೊಳಿಸಿದ ಎಚ್ಚರಿಕೆಯ ಕಥೆಯನ್ನು ಅವರು ಪ್ರಸ್ತಾಪಿಸುತ್ತಾರೆ.

ಮಾರ್ಚ್ 2011ರಲ್ಲಿ ಸಿರಿಯಾದಲ್ಲಿ ಬಷರ್-ಅಲ್-ಅಸದ್ ಆಡಳಿತದ ವಿರುದ್ಧದ ಅಹಿಂಸಾತ್ಮಕ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಪ್ರತಿಭಟನಾಕಾರರ ಅಮಾನುಷ, ಲೆಕ್ಕಾಚಾರದ ಹತ್ಯಾಕಾಂಡವನ್ನು ಅವರು ನೆನಪಿಸುತ್ತಾರೆ. ಅಹಿಂಸಾತ್ಮಕ ಹೋರಾಟಗಳು ಎಷ್ಟು ಯಶಸ್ವಿಯಾಗುತ್ತವೋ ಅಷ್ಟೇ ಸೋಲನುಭವಿಸುವ ಕುರಿತ ಮೈ ಜುಮ್ಮೆನಿಸುವ

ಇಂತಹ ಪ್ರಕರಣಗಳನ್ನು ಉದಾಹರಣೆಯಾಗಿ ನೀಡುತ್ತಾರೆ. ಆದರೆ ಇಂತಹ ದಮನಕಾರಿ ಆಡಳಿತ ವ್ಯವಸ್ಥೆಯು ತಮ್ಮ ಮೇಲೆ ಸಂಪೂರ್ಣ ನಿಷ್ಠರಾಗಿರುವ ಕೆಳ ದರ್ಜೆಯ ಅಧಿಕಾರಿಗಳ ನಿಷ್ಠೆಯನ್ನು ಸಾಮೂಹಿಕ ದಂಗೆಯ ಶಮನಕ್ಕೆ ಅಸಾಧ್ಯವೇ ಎನ್ನುವಂತಹ ಸಿರಿಯಾ ಮಾದರಿಯಲ್ಲಿ ಬಳಸುತ್ತಾರೆಂಬುದನ್ನು ಊಹಿಸಲೂ ಸಾಧ್ಯವಿಲ್ಲ.

ಲೀ ಸ್ಮಿಥೇ, ಲೆಸ್ಟರ್ ಕರ್ಸ್ಟ್ಜ ಹಾಗೂ ಸಹ ಕರ್ತೃರ ಪ್ರಕಾರ ಶಸ್ತ್ರ ರಹಿತ ಹೋರಾಟಗಾರರ ಮೇಲೆ ಆಡಳಿತಶಾಹಿಯ ದಬ್ಬಾಳಿಕೆ ಕೆಲವೊಮ್ಮೆ ಹಿಂದೇಟು ನೀಡಬಹುದು. ನೈತಿಕವಾದ ವಿರೋಧ, ಹೆಚ್ಚಿನ ಭಾಗವಹಿಸುವಿಕೆ, ಹೋರಾಟಕ್ಕೆ ತೃತೀಯ ಶಕ್ತಿ ಬೆಂಬಲ ಸೃಷ್ಟಿ,ಭದ್ರತಾ ಪಡೆಗಳ ಯೋಧರ ನಿಷ್ಠೆ ನಿರಂತರ ಬದಲಾವಣೆಗಳಿಗೆ ಕಾರಣವಾಗಬಹುದು. ಕೆಲವೊಂದು ಬಾರಿ ದಮನಕಾರಿ ಅಧ್ಯಾಯಗಳು ಅಹಿಂಸಾತ್ಮಕ ಚಳವಳಿ ಕೊನೆಗಾಣಿಸುವ ಬದಲು ಹುಟ್ಟಿಗೆ ಕಾರಣವಾಗಬಹುದು. ಎಮೆಟ್ ಟಿಲ್ರ ಹತ್ಯೆಯು ಅತ್ಯಂತ ಭೀಕರವಾದ ಹಿಂಸೆಯ ಭಾಗವಾಗಿ ಅಭೂತಪೂರ್ವವಾದ ಬೆಂಬಲ, ಅನುಕಂಪ ಮತ್ತು ಅಮೆರಿಕದ ನಾಗರಿಕ ಹಕ್ಕುಗಳ ಹೋರಾಟದ ಉದಾಹರಣೆ ಆಗಿರಬಹುದು.

ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ದಿನಾಚರಣೆ ಅಂಗವಾಗಿ ಅವರ ಒಳ ದೃಷ್ಟಿಯ " ಬರ್ಮಿಂಗ್ಹ್ಯಾಮ್ ಜೈಲಿನಿಂದ ಪತ್ರ"ದ ಉದ್ಧೃತಭಾಗವೊಂದನ್ನು ನಮ್ಮ ಓದುಗರಿಗೆ ನೀಡುತ್ತಿದ್ದೇವೆ.

"ನನ್ನ ಮಿತ್ತರೇ, ನ್ಯಾಯಯುತವಾದ ಮತ್ತು ಅಹಿಂಸಾತ್ಮಕ ಒತ್ತಡದ ಹೊರತಾಗಿ ನಾಗರಿಕ ಹಕ್ಕುಗಳಲ್ಲಿ ನಾವು ಏನನ್ನೂ ಗಳಿಸಿಲ್ಲ. ವಿಶೇಷ ಸೌಲಭ್ಯಗಳನ್ನು ಪಡೆದ ಸಮೂಹಗಳು ಸ್ವಯಂಪ್ರೇರಿತವಾಗಿ ತಮ್ಮ ಸೌಲಭ್ಯಗಳನ್ನು ಬಿಟ್ಟುಕೊಡಲಾರರು. ವ್ಯಕ್ತಿಗಳು ನೈತಿಕ ಬದಲಾವಣೆಯನ್ನು ಕಂಡು ಸ್ವಯಂ ಪ್ರೇರಿತರಾಗಿ ಅನೈತಿಕ ಮನೋಭಾವವನ್ನು ಬಿಟ್ಟು ಬಿಡಬಹುದು. ಆದರೆ ರೆನೋಲ್ಡ್ ನೀಬಹ್ರ್ ನಮಗೆ ನೆನಪಿಸಿರುವಂತೆ ವ್ಯಕ್ತಿಗಳಿಗಿಂತ ಹೆಚ್ಚಾಗಿ ಗುಂಪುಗಳು ಹೆಚ್ಚು ಅನೈತಿಕವಾಗಿರುತ್ತವೆ. ಯಾವತ್ತೂ ಸ್ವಾತಂತ್ರ್ಯವನ್ನು ಆಕ್ರಮಣಕೋರರು ಸ್ವಯಂಪ್ರೇರಿತರಾಗಿ ನೀಡುವುದಿಲ್ಲ ಎಂಬ ನೋವಿನ ಅನುಭವದ ಅರಿವು ನಮಗಿದೆ.

ಅಹಿಂಸಾತ್ಮಕ ಪ್ರತಿರೋಧದ ನೈತಿಕ ಮತ್ತು ಪ್ರಾಯೋಗಿಕ ಆಯಾಮಗಳ ಕುರಿತಾಗಿ ಕಿಂಗ್ ಕಾಳಜಿ ಹೊಂದಿದ್ದರು. ಆದರೆ ಈ ಪ್ರಾಯೋಗಿಕ ಆಯಾಮಗಳನ್ನು ಎಂದೂ ಕಡೆಗಣಿಸಬಾರದು. ಬರ್ಮಿಮಗ್ಹ್ಯಾಮ್ ಪತ್ರದಂತೆ ಅಹಿಂಸಾತ್ಮಕ ಪ್ರತಿರೋಧದಿಂದ ಸಾಕಷ್ಟು ಕಲಿಯುವ ಅವಶ್ಯಕತೆ ಇದೆ. ಇದು ಹೊರಹೊಮ್ಮುತ್ತಿರುವ ಪ್ರಕ್ರಿಯೆಯಾಗಿದ್ದು ಸಮಾಜ ವಿಜ್ಞಾನದಲ್ಲಿ ಈ ಕುರಿತಾದ ಸಂಶೊಧನೆ ಕೂಡ ಹೊರಹೊಮ್ಮುತ್ತಿದೆ. ದಬ್ಬಾಳಿಕೆಯನ್ನು ಎದುರಿಸಲು ಪ್ರಯತ್ನಿಸುತ್ತಿರುವವರು ಈ ವಿಚಾರದ ಕ್ರಮಬದ್ಧವಾದ ಸಂಶೋಧನೆಗಳಿಂದ ಪ್ರಯೋಜನ ಪಡೆಯಬಹುದು. ಅಹಿಂಸಾತ್ಮಕ ಪ್ರತಿಭಟನೆಗಳನ್ನು ವಿವಿಧ ವಿಚಾರಗಳಲ್ಲಿ ಹೇಗೆ ಮತ್ತು ಯಾವಾಗ ಬಳಸಬಹುದೆಂಬುದನ್ನು ಅರಿತುಕೊಳ್ಳಬಹುದು. ಅಧಿಕಾರಶಾಹಿ ಮರು ಜೀವಪಡೆದುಕೊಳ್ಳುವುದು, ಆಡಳಿತದ ಶೈಥಿಲ್ಯದಿಂದ ಹಿಂಸಾತ್ಮಕವಾದ ಭಯೋತ್ಪಾದನೆಗಳ ಸವಾಲುಗಳಿಂದ ತತ್ತರಿಸಿರುವ ನೀತಿ ನಿರೂಪಕರು ಯಾಕೆ ಅಹಿಂಸಾತ್ಮಕ ಚಳವಳಿಗಳು ಯಶಸ್ವಿಯಾಗುತ್ತವೆ ಹಾಗೂ ಪರಿಣಾಮಕಾರಿಯಾಗಿ ಇದನ್ನು ಬೆಂಬಲಿಸಬಹುದು ಎಂಬ ಕುರಿತಾದ ಆಳವಾದ ಅರಿವಿನ ಲಾಭ ಪಡೆಯಬಹುದು.

ಅಹಿಂಸಾತ್ಮಕ ಪ್ರತಿರೋಧವನ್ನು ಈ ಹಿಂದಿಗಿಂತಲೂ ಹೆಚ್ಚಾಗಿ ಅನುಸರಿಸುತ್ತಿರುವ ಇಂದಿನ ಕಾಲಘಟ್ಟದಲ್ಲಿ ಜ್ಞಾನಿಗಳು ಹಾಗೂ ವೃತ್ತಿಪರರು ಗಾಂಧಿ ಮತ್ತು ಕಿಂಗ್ರ ಅನುಕರಣೀಯ ಮತ್ತು ನೀತಿಯುತ ಜಾಣ್ಮೆ ಮೂಲಕ ಮುಂದುವರೆಯುವುದನ್ನು ರೂಢಿಸಿಕೊಳ್ಳಬಹುದು.

*ಎರಿಕಾ ಚೆನೊವೆಥ್ ಡೆನ್ವೆರ್ ವಿವಿಯ ಜೋಸೆಫ್ ಕಾರ್ಬೆಲ್ ಸ್ಕೂಲ್ನ ಅಂತಾರಾಷ್ಟ್ರೀಯ ಅಧ್ಯಯನ ವಿಭಾಗದ ಪ್ರಾಧ್ಯಾಪಕರು.ಪೊಲಿಟಿಕಲ್ ವಾಯಲೆನ್ಸ್@ಗ್ಲಾನ್ಸ್ ಎಂಬ ಬ್ಲಾಗ್ನ ಜಂಟಿ ಸಂಪಾದಕಿ ಆಗಿರುವ ಇವರು ದಿ ಮಂಕಿ ಕೇಜ್ನ ಹವ್ಯಾಸಿ ಬ್ಲಾಗರ್. ಮರಿಯಾ ಜೆ.ಸ್ಟೀಫನ್ ಅಮೆರಿಕದ ಇನ್ಸಿಟಿಟ್ಯೂಟ್ ಆಫ್ ಪೀಸ್ನ ಹಿರಿಯ ಗೌರವ ಸದಸ್ಯರಾಗಿದ್ದು ಅಟ್ಲಾಂಟಿಕ್ ಕೌನ್ಸಿಲ್ನ ಗೌರವ ಸದಸ್ಯರೂ ಆಗಿದ್ದಾರೆ.*

***************************